"ಸರಿ ಆಯಿತು, ಹೋಗಿ ಬರ್ತೀನಿ... ಆದ್ರೆ ಅವರು ಬಂದು ಎಲ್ಲಿ ಕುತ್ಕೊಬೇಕು ಅಂತ ಯೋಚಿಸಿದಿಯಾ?..."

"ಇಲ್ಲ. ಎಲ್ಲಿಯಾದರೂ ಮಂಚ ಸಿಕ್ಕರೆ?... ಆ ಠಾಕು ರಾಣಿಗೆ ಕೇಳಿ ನೋಡಿ, ಸಿಕ್ಕರೆ ತನ್ನಿ..."

"ಜುರಿಯಾ , ನೀನು ಒಮ್ಮೊಮ್ಮೆ ವಿಚಿತ್ರವಾಗಿ ಮಾತಾಡ್ತಿಯಲ್ಲಾ... ಮೈಯೆಲ್ಲಾ ಉರಿಯುತ್ತೆ. ಆ ಠಾಕು ರಾಣಿ ನನಗೆ ಮಂಚ ಕೊಡ್ತಾಳ?... ಅಲ್ಲಿ ಹೋಗಿ ಒಂದು ಲೋಟ ನೀರು ಕೇಳಿದ್ರೆ ಸಿಗಲ್ಲ... ಇನ್ನು ಮಂಚ ಬೇರೆ... ನಮ್ಮಲ್ಲಿರುವ ಈ ಹೊರಸನ್ನೇ ತೊಳೆದಿಡು... ಹೇಗೂ ಬೇಸಿಗೆ ಕಾಲ... ಅವರು ಬರುವಷ್ಟರಲ್ಲಿ ಒಣಗಿ ಬಿಡುತ್ತದೆ..."

"ನಮ್ಮ ಈ ಹೊರಸಿನ ಮೇಲೆ ಅವರು ಕುಳಿತುಕೊಳ್ತಾರಾ?... ನೋಡಿಲ್ವಾ!... ಅವರೆಷ್ಟು ನಿಯಮ ನಿಷ್ಠೆ ಮಾಡ್ತಾರೆ ಅಂತ." ಜುರಿಯಾಳ ಮಾತಿಗೆ ದುಖಿ ಚಿಂತಿತನಾದ.

"ಹಾಂ... ಅದಂತೂ ನಿಜ, ಹಾಗೆಯೇ ಮುತ್ತುಗದ ಎಲೆ ಕಡೆದು ತರಬೇಕು. ಪತ್ರೊಳಗಿ ಮಾಡಿದರೆ ಒಳಿತು. ಅದರಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳು ಕೂಡಾ ಊಟ ಮಾಡುತ್ತಾರೆ. ಅದು ಅಷ್ಟು ಶುದ್ಧ ಮತ್ತು ಪವಿತ್ರ... ಕೋಲು ಕೊಡು. ಎಲೆ ಬಿಡಿಸಿ ತರ್ತೀನಿ..."

"ಅಯ್ಯೋ ಮೊದಲು ನೀವು ಹೊರಡಿ... ಪತ್ರೋಳ್ಗಿ ನಾ ಮಾಡ್ತೀನಿ. ಅವರಿಗಿನ್ನೂ ದವಸ ಧಾನ್ಯ ಬೇರೆ ಕೊಡಬೇಕಲ್ಲಾ!... ಮಡಕೆಯಲ್ಲಿ ಹಾಕಿಡಲಾ?..." ಎಂದಳು ಜುರಿಯಾ

"ಮಡಕೆಯಲ್ಲಾದರೆ ಅವರು ಝಾಡಿಸಿ ಒದ್ದು ಬಿಡ್ತಾರಷ್ಟೆ... ಆಗ ಮಡಿಕೆನೂ ಇರಲ್ಲ, ನಿನ್ನ ದವಸ ಧಾನ್ಯನೂ ಇರಲ್ಲ. ಅವರಿಗೆ ಸಿಟ್ಟು ಜಾಸ್ತಿ. ತಮ್ಮ ಮಡದಿಗೂ ಬಿಡಲ್ಲ. ಅವರ ಹುಡುಗನಿಗೆ ಹೇಗೆ ಹೊಡೆದರು ಅಂತಿಯಾ... ಮುರಿದ ಕೈಯಲ್ಲಿಯೇ ಓಡಾಡುತ್ತಿದ್ದಾನೆ ಗೊತ್ತಾ... ಹಿತ್ತಾಳೆ ಬಿಂದಿಗೆಯಲ್ಲಿ ಎಲ್ಲಾ ದವಸ ಧಾನ್ಯ ತುಂಬಿಡು. ಹಿಟ್ಟು ಬೇಳೆ ಅಕ್ಕಿ ಬೆಲ್ಲ ಎಣ್ಣೆ... ಎಲ್ಲವೂ ಇರಲಿ, ಮರಿಬೇಡ. ಮುದಾ ನೀ ಏನೂ ಮುಟ್ಟಲಿಕ್ಕೆ ಹೋಗಬೇಡ..." ಎಂದು ದುಖಿ ಎಚ್ಚರಿಸಿದ.

"ಗೊಂಡರ ಹುಡುಗಿಗೆ ಕರೆದುಕೊಂಡು ಹೋಗಿ ಸಾಹುನ ಅಂಗಡಿಯಲ್ಲಿ ಎಲ್ಲಾ ಪದಾರ್ಥಗಳನ್ನು ತೊಗೊಂಡು ಬನ್ನಿ. ದವಸ ಧಾನ್ಯಗಳು ಭರಪೂರ ಇರಬೇಕು. ಸೇರು ಹಿಟ್ಟು, ಅರ್ಧ ಸೇರು ಅಕ್ಕಿ, ಪಾವು ಬೇಳೆ, ಅರ್ಧ ಪಾವು ತುಪ್ಪ, ಉಪ್ಪು, ಅರಿಸಿನ ಮತ್ತು ಪಂಚೆ ಮೂಲೆಯಲ್ಲಿ ನಾಲ್ಕಾಣೆ ಕಟ್ಟಿಡಬೇಕು. ಗೊಂಡನ ಹುಡುಗಿ ಸಿಗದಿದ್ದರೆ ಭುರ್ಜಿನ್ ಕೈ ಕಾಲು ಹಿಡಿದು ಕೇಳು..." ಎಂದು ಜುರಿಯಾ ಎಚ್ಚರಿಕೆ ನೀಡಿದಳು. ಕಾರ್ಯಕ್ರಮದ ರೂಪುರೇಷೆ ಗ್ರಹಿಸಿದ ದುಖಿ ಕಟ್ಟಿಗೆಯನ್ನೆಲ್ಲಾ ಒಂದೆಡೆ ಸರಿಸಿದ. ದೊಡ್ಡವರ ಭೇಟಿಗೆ ಬರಿಗೈಯಲ್ಲಿ ಹೋಗಲಾಗದು. ಕಾಣಿಕೆ ಕೊಡಲು ಹುಲ್ಲಿನ ಹೊರೆ ಎತ್ತಿಕೊಂಡ. ಅವನಲ್ಲಿ ಹುಲ್ಲಿನ ಹೊರೆ ಬಿಟ್ಟರೆ ಇನ್ನೇನು ಇರಲಿಲ್ಲ.

ಬರಿಗೈಯಲ್ಲಿ ಅರಿಕೆ ಮಾಡಿಕೊಳ್ಳಲು ಹೋದರೆ ಪಂಡಿತರು ದೂರದಿಂದಲೇ ಅಟ್ಟಿ ಬಿಡುತ್ತಿದ್ದರು. ಅವರು ದಾಸಿರಾಮ ಈಶ್ವರರ ಪರಮ ಭಕ್ತರಾಗಿದ್ದರು. ನಿದ್ರೆಯಿಂದ ಎದ್ದವರೇ ಪೂಜೆ ಪುನಸ್ಕಾರಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಮುಖ ಮಾರ್ಜನ ಪ್ರಾತಃವಿಧಿ ತೀರಿಸಲು ಅವರಿಗೆ ಎಂಟು ಗಂಟೆಯೇ ಆಗುತ್ತಿತ್ತು. ನಂತರವೇ ಮುಖ್ಯ ಪೂಜೆ ಶುರು!... ಪ್ರಥಮ ಕಾರ್ಯವೇ ಭಂಗ ತಯಾರಿಸುವುದು, ನಂತರ ಶ್ರೀಗಂಧ ತೇಯುವುದು, ಆಮೇಲೆ ಕನ್ನಡಿ ಮುಂದೆ ನಿಂತು ಹಣೆಗೆ ತಿಲಕವಿಡುವುದು, ಶ್ರೀಗಂಧದ ಎರಡು ರೇಖೆ ಮಧ್ಯೆ ಕೆಂಪು ಬಿಂದು ಕಂಗೊಳಿಸಬೇಕು, ಎದೆಯ ಮೇಲೆ, ಬಾಹುಗಳ ಮೇಲೆಯೂ ಶ್ರೀಗಂಧದ ಗೋಲಾಕಾರದ ಆಕೃತಿಗಳನ್ನು ನಮೂದಿಸಿಕೊಳ್ಳುತ್ತಿದ್ದರು. ಆಮೇಲೆ ಠಾಕೂರ್‌ಜಿ ಮೂರ್ತಿ ಹೊರತೆಗೆದು ನೀರಿನಲ್ಲಿ ಅಭಿಷೇಕ ಮಾಡಿ ಶ್ರೀಗಂಧ ಲೇಪಿಸಿ ಹೂವು ಇರಿಸಿ ಆರತಿ ಬೆಳಗಿ ಘಂಟೆ ಬಾರಿಸುತ್ತಿದ್ದರು. ಆಗ ಹತ್ತು ಗಂಟೆಯಾಗುತ್ತಿತ್ತು. ಪೂಜೆಯಿಂದ ಮೇಲೆದ್ದು ಭಂಗ ಸೋಸಿಟ್ಟು ಹೊರಬರುತ್ತಿದ್ದರು. ಅಷ್ಟರಲ್ಲಿ ಮೂರ್ನಾಲ್ಕು ಜನ ಬಾಗಿಲು ಮುಂದೆ